ನಿಲ್ಲಬೇಕಾಗಿರ್ಲಿಲ್ಲ, ಅವನನ್ನು ಅರೆಸ್ಟ್ ಮಾಡ್ಸಿ ಈ ಬಂಗ್ಲೆಗೆ ಶಾಶ್ವತವಾದ ಕಳಂಕ ತಂದ್ಬಿಟ್ಟ..' ಚಿಕ್ಕಮ್ಮನ ಮಾತಿಗೆ ಋತು ಪ್ರತಿಕ್ರಿಯಿಸಲಿಲ್ಲ. ಭಯಂಕರ ರಕ್ತದಾಹಿಯಾಗಿ ಬದಲಾದ ಭರತನ ಬಂಧನವಾಗದಿದ್ದರೆ ಇನ್ನೂ ಅದೆಷ್ಟು ವಿದ್ಯಾರ್ಥಿಗಳು ಪ್ರಾಣ ಕಳೆದುಕೊಳ್ಳುತ್ತಿದ್ದರೋ ಏನೋ, ಯಾಕೋ ಚಿಕ್ಕಮ್ಮನದು ಕುರುಡು ಮಾತೃವಾತ್ಸಲ್ಯವೆನಿಸಿತು.

'ಋತು....ಇನ್ನೂ ಒಂದು ಮಾತು, ನಾನು ಅಷ್ಟು ಹೇಳಿದ್ರೂ ನೀನು ಹೇಮಂತನ ಸಹವಾಸವನ್ನು ಬಿಟ್ಟಿಲ್ಲ ಅಂತ ನಂಗೆ ಚೆನ್ನಾಗಿ ಗೊತ್ತಿದೆ. ನಿಮ್ಮ ತಂದೆ ಬೇರೆ ಕಾಲೇಜಿನ ಪರೀಕ್ಷೆಗಳೆಲ್ಲಾ ಮುಗಿದ್ಮೇಲೆ ನಿಮ್ಮಿಬ್ಬರ ಮದ್ವೆಯನ್ನು ಮಾಡಬೇಕೂಂತಿದ್ದಾರೆ, ನೋಡು, ಅವರಿಗೆ ಎದುರು ಹೇಳುವ ಶಕ್ತಿ ನನಗಿಲ್ಲ, ನಿಂಗೆ ನನ್ನ ಮೇಲೆ ಸ್ವಲ್ಪವಾದ್ರೂ ಪ್ರೀತಿ ಉಳಿದುಕೊಂಡಿದ್ರೆ, ನಾನು ನಿನಗೆ ನಿಜವಾಗಿಯೂ ಕೈ ತುತ್ತು ಕೊಟ್ಟು ಬೆಳೆಸಿದ್ರೆ ಈ ಮದ್ವೇನ ನಿಲ್ಸು...' ಕಲಾವತಿ ಅಳತೊಡಗಿದಾಗ ಋತುವಿಗೆ ಕೆಡುಕೆನಿಸಿತು. ಭರತನ ಆಗಲಿಕೆ ಅವಳನ್ನು ದುಃಖದ ಸಾಗರಕ್ಕೆ ದೂಡಿದೆ. ಆದರೆ ಆಕೆ ಈಗಲೂ ತಾನು, ಹೇಮಂತ ಒಂದಾಗುವುದನ್ನು ವಿರೋಧಿಸುತ್ತಿದ್ದಾಳೆ....ಇವೆಲ್ಲಾ ನೋಡಿದರೆ ಎಲ್ಲೋ ಅನುಮಾನದ ಎಳೆಯೊಂದು ಸಿಗತೊಡಗಿದೆ.

'ಚಿಕ್ಕಮ್ಮ....ಪ್ಲೀಸ್, ಅಳ್ಬೇಡ, ನೀನು ಇಷ್ಟು ದಿನ ನಂಗೆ ತೋರಿಸಿರುವ ಪ್ರೀತಿ ನಿಜವಾದದ್ದೇ ಆದ್ರೆ ನೀನು ಅಂದುಕೊಂಡ ಹಾಗೆಯೇ ಎಲ್ಲಾ ನಡೆಯುತ್ತೆ ಬಿಡು, ತಲೆಕೆಡಿಸಿಕೊಳ್ಬೇಡ....' ಎಂದವಳೇ ಋತು ಕಲಾವತಿಗೆ ಬೆನ್ನು ಹಾಕಿ ಮಲಗಿಬಿಟ್ಟಳು. ಕೇವಲ ಕೆಲವೇ ದಿನಗಳ ಹಿಂದೆ ತನ್ನ ಪ್ರೀತಿಯ ಚಿಕ್ಕಮ್ಮನಾಗಿದ್ದವಳು ಇವಳೇನಾ ಎನ್ನುವಷ್ಟು ಕಲಾವತಿ ಬದಲಾಗಿದ್ದುದು ಅವಳಿಗೂ ಸಂಕಟವನ್ನು ತರಿಸಿತ್ತು.

ಮರುದಿನ ಅವಳು ಕಣ್ಬಿಡುವ ವೇಳೆಗೆ ಸಾಕಷ್ಟು ಬಿಸಿಲೇರಿತ್ತು. ಕಲಾವತಿ ಯಾವಾಗಲೋ ಕೆಳಗಿಳಿದು ಹೋಗಿದ್ದಳು. ಈ ದಿನ ಕಾಫಿ ಕೊಡುವುದಕ್ಕೂ ಯಾರೂ ಬರಲಿಲ್ಲ. ಸ್ನಾನ ಮುಗಿಸಿಕೊಂಡೇ ಕೆಳಗಿಳಿದು ಬಂದಳು ಋತು. ಸುಂದರಿ ಕೆಲಸಗಳನ್ನೆಲ್ಲಾ ಮುಗಿಸಿ ಹೊರಟು ಹೋಗಿದ್ದಳು. ತಂದೆಯೂ ಹೊರಟು ಹೋಗಿದ್ದರಿಂದ ಬಂಗಲೆ ಭಣಗುಟ್ಟತೊಡಗಿತ್ತು.

ಕಲಾವತಿ ಋತು ಕೆಳಗಿಳಿದು ಬಂದುದನ್ನು ನೋಡಿ ಮೌನವಾಗಿ ತಿಂಡಿಯ ತಟ್ಟೆಯನ್ನು ಕೈಗಿತ್ತು ಒಳನಡೆದಾಗ ಋತುವಿಗಂತೂ ಮೈ ಪರಚಿಕೊಳ್ಳುವಂತಾಯಿತು. ಇಂಥ ವಾತಾವರಣದಲ್ಲಿ ನಾಲ್ಕು ದಿನವಿದ್ದರೆ ತನಗೆ ಹುಚ್ಚೇ ಹಿಡಿಯಬಹುದೆನಿಸಿತು. ಅಕ್ವೇರಿಯಂನ ಮುಂದೆ ಖಾಲಿ ಇದ್ದ ಕುರ್ಚಿಯನ್ನು ನೋಡಿ ಭರತನ ನೆನಪಾಗಿ ಕಣ್ತುಂಬಿತು.

ತಿಂಡಿ ಮುಗಿಸಿ ಕೈ ತೊಳೆದು ಬಂದರೂ ಕಲಾವತಿ ಅವಳನ್ನು ಮಾತನಾಡಿಸಲಿಲ್ಲ. ಕೆಲಸಗಳನ್ನು ಹುಡುಕಿ ಹುಡುಕಿ ಮಾಡುತ್ತಿರುವ ಚಿಕ್ಕಮ್ಮನ ಬಗ್ಗೆ ಸದ್ಯಕ್ಕೆ ಮೌನವಾಗಿರುವುದೇ ಒಳ್ಳೆಯದೆನಿಸಿತು.

ಈ ದಿನ ಭಾನುವಾರವಾದ್ದರಿಂದ ಕಾಲೇಜಿಗೆ ಹೋಗುವ ಧಾವಂತವೂ ಇರಲಿಲ್ಲ. ಹೇಗೂ ಸುಂದರಿ ಈಗ ಔಟ್‌ಹೌಸಿನಲ್ಲೇ ಒಂಟಿಯಾಗಿರುತ್ತಾಳೆ, ಹೇಗಾದರೂ ಅವಳ ಹತ್ತಿರ ತನ್ನ ತಾಯಿಯ ಬಗ್ಗೆ ವಿಚಾರಿಸಬೇಕೆಂದುಕೊಂಡವಳು ಸದ್ದಿಲ್ಲದೆ ಬಂಗಲೆಯ ಬಲಭಾಗದಲ್ಲಿರುವ ಔಟ್‌ಹೌಸಿನತ್ತ ಹೆಜ್ಜೆ ಹಾಕಿದಳು.

ಔಟ್‌ಹೌಸಿನ ಬಾಗಿಲು ಹಾಕಿತ್ತು. ಬಾಗಿಲನ್ನು ತಟ್ಟಬೇಕೆಂದು ಅದರ ಮೇಲೆ ಕೈ ಇಟ್ಟೊಡನೆ ತೆರೆದುಕೊಂಡಿತು. ಸುಂದರಿಯನ್ನು ಕರೆಯುತ್ತಾ ಮನೆಯ ಒಳಗೆಲ್ಲಾ ಓಡಾಡಿ ಬಂದಳು ಋತು. ಆದರೂ ಸುಂದರಿಯ ಸುಳಿವಿರಲಿಲ್ಲ. ಈ ಮಟ ಮಟ ಮಧ್ಯಾಹ್ನದಲ್ಲಿ ಅವಳೆಲ್ಲಿಗೆ ಹೋಗಿರಬಹುದು? ಯೋಚಿಸುತ್ತಲೇ ಹೊರಗೆ ಬಂದಳು. ಇನ್ನೇನು ಬಂಗಲೆಗೆ ಹಿಂದಿರುಗಬೇಕೆನ್ನುವಷ್ಟರಲ್ಲಿ ಸುಂದರಿ, ಚಂದ್ರಪ್ಪರ ಮಾತುಗಳು ಕೇಳಿ ಬಂದಾಗ ಚಕಿತಳಾಗಿ ಧ್ವನಿ ಬಂದತ್ತ ತಿರುಗಿದಳು. ಅವರಿಬ್ಬರೂ ಔಟ್‌ಹೌಸಿಗೆ ಹೊಂದಿಕೊಂಡಿರುವ ಬಚ್ಚಲು ಮನೆಯಿಂದ ಹೊರ ಬರುತ್ತಿದ್ದರು. ಅವರ ಕಣ್ಣಿಗೆ ಬೀಳದಂತೆ ಋತು ಮರಗಳ ಹಿಂದೆ ಅಡಗಿ ಕುಳಿತಳು. ಅವರಿಬ್ಬರೂ ಔಟ್‌ಹೌಸಿನೊಳಗೆ ಹೋಗುವವರೆಗೂ ಮರೆಯಲ್ಲಿ ನಿಂತು ಅವರಿಬ್ಬರನ್ನು ಗಮನಿಸಿದಳು. ಇಷ್ಟು ಹೊತ್ತಿಗೆ ಇಬ್ಬರೂ ಒಟ್ಟಿಗೆ ಬಚ್ಚಲು ಮನೆಗೆ ಹೋಗಿ ಬರುವ ಪ್ರಮೇಯವಾದರೂ ಏನಿದೆ? ಅಲ್ಲದೆ ಅವರಿಬ್ಬರನ್ನು ನೋಡಿದರೆ ಆಗಷ್ಟೇ ಸ್ನಾನ ಮಾಡಿ ಬಂದ ಹಾಗೆಯೂ ಕಂಡಿರಲಿಲ್ಲ. ಇಲ್ಲೇನೋ ರಹಸ್ಯವಿದೆ ಎಂದೆನಿಸತೊಡಗಿತು ಋತುವಿಗೆ. ಮರೆಯಾದ ಜಾಗದಿಂದ ಹೊರಬಂದು ಸದ್ದಿಲ್ಲದೆ ಅವರ ಬಚ್ಚಲು ಮನೆಯೊಳಗೆ ಪ್ರವೇಶಿಸಿದಳು. ಸ್ನಾನದ ಮನೆ ಉದ್ದವಾಗಿತ್ತು. ಒಂದು ಕಡೆ ತಾಮ್ರದ ಹಂಡೆಯನ್ನು ಹುದುಗಿಸಿ ಸೌದೆ ಒಲೆಯ ವ್ಯವಸ್ಥೆಯನ್ನು ಮಾಡಲಾಗಿತ್ತು. ಉದ್ದ ನೀರಿನ ತೊಟ್ಟಿಯಿತ್ತು. ಅಲ್ಲಿ ಎಲ್ಲವೂ ಸರಿಯಾಗಿಯೇ ಇತ್ತು. ಅನುಮಾನ ಪಡುವಂತಹುದು ಅವಳಿಗೇನೂ ಕಾಣಲಿಲ್ಲ. ಇನ್ನೇನು ಹಿಂದಿರುಗಬೇಕೆಂದು ಕೊಳ್ಳುವಾಗಲೇ ಅವಳ ದೃಷ್ಟಿಗೆ ಸಂಪಿನಂತಹುದೇನೋ ಕಂಡಿತು. ಅದನ್ನು ನೆಲದಲ್ಲಿ ಹುದುಗಿಡಲಾಗಿತ್ತು. ಅದರತ್ತ ಒಂದು ಕ್ಷಣ ನೋಡಿದಳು. ಅದಕ್ಕೆ ಒಂದು ಹಿಡಿಯೂ ಇತ್ತು. ಯಾವುದೋ ಪ್ರೇರಣೆಗೊಳಗಾದವಳಂತೆ ಋತು ಮೆಲ್ಲನೆ ಆ ಹಿಡಿಕೆಯನ್ನು ಮೇಲೆತ್ತಿದಳು.

ಒಳಗೆ ಕಂಡ ದೃಶ್ಯವನ್ನು ನೋಡಿ ಒಂದು ಕ್ಷಣ ಬೆಚ್ಚಿದಳು....ಅಂದರೆ ಅಲ್ಲೊಂದು ನೆಲಮಾಳಿಗೆ ಇರಬೇಕೆಂದು ಸುಲಭದಲ್ಲಿ ಊಹಿಸಿದಳು.

ಕತ್ತಲು ತುಂಬಿರುವ ಆ ಮೆಟ್ಟಿಲುಗಳನ್ನು ನೋಡಿ ಮನಸ್ಸು ಒಂದು ಕ್ಷಣ ಅಳುಕಿತು. ಆಗ ಕಣ್ಮುಚ್ಚಿಕೊಂಡು ಅಪ್ಪಾಜಿ ತನಗೆ ಹೇಳಿಕೊಟ್ಟಂತೆ ಹುಬ್ಬುಗಳ ಮಧ್ಯೆ ಒಂದು ದೀಪವನ್ನು ಕಲ್ಪಿಸಿಕೊಂಡು ಅದರತ್ತಲೇ ಮನಸ್ಸನ್ನು ಕೇಂದ್ರೀಕರಿಸಿ ನಿಧಾನವಾಗಿ ಉಸಿರನ್ನು ಒಳಗೆಳೆದುಕೊಂಡು ಹೊರ ಬಿಡತೊಡಗಿದಳು. ಹಾಗೆ ಐದು ನಿಮಿಷಗಳ ಕಾಲ ಮಾಡುವುದರೊಳಗೆ ಅವಳ ಮನಸ್ಸು ತಹಬದಿಗೆ ಬಂದು ಆತ್ಮವಿಶ್ವಾಸ ಅವಳಿಗರಿವಿಲ್ಲದಂತೆ ಉಕ್ಕಿತು.

## ನೆಲ ಮಾಳಿಗೆಯಲ್ಲಿತ್ತು ರಹಸ್ಯ..!

ನಿಧಾನವಾಗಿ ಕಣ್ತೆರೆದವಳು ಎದುರಿಗೆ ಕಂಡ ಆ ಮೆಟ್ಟಿಲುಗಳನ್ನು ಜಾಗ್ರತೆಯಾಗಿ ಇಳಿಯತೊಡಗಿದ್ದಳು. ಆ ಮೆಟ್ಟಿಲುಗಳು ಬಹಳ ಚಿಕ್ಕದಾಗಿದ್ದವು. ಜೊತೆಗೆ ಸುತ್ತಲಿನ ಗೋಡೆಯೂ ಬಹಳ ಹತ್ತಿರದಲ್ಲಿತ್ತು. ಸ್ವಲ್ಪ ಎಚ್ಚರ ತಪ್ಪಿದರೂ ಕಲ್ಲಿನ ಗೋಡೆಗೆ ಕೈ ತರಚಿಕೊಳ್ಳುತ್ತಿತ್ತು. ಇಳಿಯುತ್ತಾ ಹೋದ ಹಾಗೆ ಬೆಳಕು ಪೂರ್ತಿಯಾಗಿ ಕಣ್ಮರೆಯಾಗಿ ಕತ್ತಲೆಯೇ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸತೊಡಗಿತು.

ಕೊನೆಗಾಣದ ಆ ಮೆಟ್ಟಿಲುಗಳನ್ನು ಅಂದಾಜಿನ ಮೇಲೆ ಇಳಿಯತೊಡಗಿದ್ದಳು. ಹಾಗೆ ಸುಮಾರು ಐವತ್ತು ಮೆಟ್ಟಿಲುಗಳನ್ನಾದರೂ ಇಳಿದಿರಬೇಕು. ಮಟ್ಟಸವಾದ ನೆಲ ಸಿಕ್ಕಿತು. ಎಲ್ಲಿಂದಲೋ ಗವಾಕ್ಷಿಯಿಂದ ಮಸುಕು ಬೆಳಕು ತೂರಿ ಬರತೊಡಗಿತ್ತು. ಆ ಮಸಕು ಕತ್ತಲೆಗೆ ತನ್ನ ಕಣ್ಣುಗಳನ್ನು ಹೊಂದಿಸಿಕೊಳ್ಳಲು ಸ್ವಲ್ಪ ಹೊತ್ತು ಬೇಕಾಯಿತು ಋತುವಿಗೆ. ನಿಧಾನವಾಗಿ ಸುತ್ತಲಿನ ಪರಿಸರ ಅನಾವರಣಗೊಳ್ಳತೊಡಗಿತು.

ಅದೊಂದು ಕಲ್ಲಿನ ಕಟ್ಟಡವಾಗಿತ್ತು. ಎತ್ತೆತ್ತರ ಕಂಬಗಳನ್ನು ನೋಡಿದರೆ ದೇವಾಲಯದ ನೆನಪಾಗುತ್ತಿತ್ತು. ಬಹಳ ವಿಶಾಲವಾದ ಆ ಹಜಾರದ ಉದ್ದಕ್ಕೂ ಓಡಾಡಿದಳು ಋತು. ಅಲ್ಲಿ ಅವಳಿಗೆ ಏನೂ ಕಂಡು ಬರಲಿಲ್ಲ. ಒಂದೆರಡು ಬಾವಲಿಗಳೂ ಪಟಪಟನೆ ಅವಳ ಹತ್ತಿರವೇ ಹಾರಿ ಹೋದಾಗ ಮಾತ್ರ ಅವಳಿಗರಿವಿಲ್ಲದಂತೆ ಮೈ ಕಂಪಿಸಿತು. ಆ ದಿನ ಹೇಮಂತ ಮೊದಲ ಬಾರಿಗೆ ಕೋಟೆ ಬಂಗಲೆಗೆ ಬಂದಾಗ ಕಂಡಿದ್ದ ಕರಿಬೆಕ್ಕನ್ನು ಈಗ ಅಲ್ಲಿ ಕಂಡಳು. ಅದು ಒಂದೆಡೆ ಕುಳಿತು ಅವಳನ್ನೇ ದುರುಗುಟ್ಟಿ ನೋಡುತ್ತಿತ್ತು. ಅದರ ಹಸಿರು ಕಣ್ಣುಗಳು ಫಳಕ್ಕನೆ ಮಿಂಚಿದವು. ಎಂಥ  ಗಂಡೆದೆಯವರಿಗೂ ಎದೆ ಝಲ್ಲೆನಿಸುವ ಸನ್ನಿವೇಶವದು. ನಿಧಾನವಾಗಿ ಕಲ್ಲಿನ ನೆಲದಲ್ಲಿ ನಡೆಯುತ್ತಿದ್ದ ಋತುವಿಗೆ ಸರಳುಗಳಿಂದ ಆವೃತ್ತವಾದ ದೊಡ್ಡ ಕೋಣೆಯೊಂದು ಕಂಡಿತು. ಆ ಕೋಣೆಯ ಬಾಗಿಲಿಗೆ ದೊಡ್ಡದೊಂದು ಬೀಗವನ್ನು ಜಡಿಯಲಾಗಿತ್ತು. ಅಲ್ಲಿಗೂ ಮಸುಕಾದ ಸೂರ್ಯನ ಬೆಳಕು ಗವಾಕ್ಷಿಯಿಂದ ಬೀಳುತ್ತಿತ್ತು. ಆ ಕೋಣೆಯಲ್ಲಿ ಯಾರೋ ಅಳುವ ಸದ್ದು ಕೇಳಿತು ಋತುವಿಗೆ. ತಾನಲ್ಲದೆ ಇನ್ಯಾರೋ ಈ ನೆಲಮಾಳಿಗೆಯಲ್ಲಿ ಇದ್ದಾರೆಂದು ಅವಳಿಗೆ ತಿಳಿದುಹೋಯಿತು....

'ಯಾರದು?' ಧೈರ್ಯ ಮಾಡಿಕೊಂಡು ಜೋರಾಗಿ ಪ್ರಶ್ನಿಸಿದಳು.

ಅಲ್ಲಿ ಹಿಂಬದಿಯಲ್ಲಿದ್ದ ಆಕೃತಿಯೊಂದು ಋತುವಿನ ಪ್ರಶೆಗೆ ಉತ್ತರ ಕೊಡುವಂತೆ ಸರಳುಗಳ ಹಿಂದೆ ಬಂದು ನಿಂತಿತು. ಆ ಆಕೃತಿಯನ್ನು ನೋಡಿ ಋತು ಕಿಟಾರೆಂದು ಕಿರುಚಿದಳು....! ಅವಳ ಚೀರುವಿಕೆ ಸುತ್ತಲಿನ ಕಲ್ಲಿನ ಗೋಡೆಗಳಿಗೆ ಅಪ್ಪಳಿಸಿ ಪ್ರತಿಧ್ವನಿಯಾಗಿ ಮರಳಿ ಬಂದಿತು. ಮತ್ತೆಲ್ಲಾ ತಣ್ಣಗಾಯಿತು. ಮಸುಕು ಕತ್ತಲೆಗೆ ತನ್ನ ಕಣ್ಣುಗಳನ್ನು ಹೊಂದಿಸಿಕೊಳ್ಳುತ್ತಾ ತನಗಾಗಿದ್ದ ಆಘಾತದಿಂದ ಮೆಲ್ಲನೆ ಚೇತರಿಸಿಕೊಳ್ಳುತ್ತಾ ಎದುರು ನಿಂತಿದ್ದ ಆ ಸ್ತ್ರೀ ಆಕೃತಿಯನ್ನು ನೋಡಿದಳು ಋತು.